**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.</u>**

**<u>ಸಿ.ಸಿ.ನಂ.1737/2025</u>**

**<u>ಫಿರ್ಯಾದಿ</u>** : ಕರ್ನಾಟಕ ಸರ್ಕಾರ
ಕುಟ್ಟ ಪೋಲೀಸ್.

**ವಿರುದ್ಧ**

**<u>ಆರೋಪಿ:</u>** ಶ್ರೀ ಗಣೇಶ್ ಕುಮಾರ್ ಬಿ.ಜಿ,
ತಂದೆಃ ಪೌತಿ ಗೋಪಾಲ್ ರಾವ್,
ಪ್ರಾಯಃ 55 ವರ್ಷ,
ವಾಸಃ ಕೋತೂರು ಗ್ರಾಮ,
ಕುಟ್ಟ, ಕೊಡಗು.

**<u>ದೋಷಾರೋಪಣೆ</u>**

*ಶ್ರೀ ಶ್ರೀನಾಥ್ ಎ, ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಯಾದ ನಾನು ಆರೋಪಿಯಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ*

ದಿನಾಂಕ 09.08.2025 ರಂದು ಸಮಯ ಸಂಜೆ 5.30 ಗಂಟೆಗೆ ಕುಟ್ಟ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಕಾನೂರು ಗೋಣಿಕೊಪ್ಪ ಮುಖ್ಯ ರಸ್ತೆಯ ಕಾನೂರು ಜನಕ್ಷನ್ ಹತ್ತಿರ ಇರುವ ಆರೋಗ್ಯ ಪ್ರಾಥಮಿಕ ಕೇಂದ್ರದ ಹತ್ತಿರ ಸಾಕ್ಷಿ 1 ಕುಟ್ಟನ್ ರವರು ಸಾಕ್ಷಿ 2 ಮೋಹನ್ ರವರ ಜೊತೆ ಕೆಲಸ ಮಗಿಸಿಕೂಂಡು ರಸ್ತೆಯಲ್ಲಿ ನಡೆದುಕೊಂಡು ಬರುತ್ತಿರುವಾಗ, ಆರೋಪಿಯಾದ ನೀವು ಸಾಕ್ಷಿ 2 ರವರ ದಾರಿಯನ್ನು ತಡೆದು ಪ್ರತಿಬಂಧಿಸಿದ್ದು, ಆ ಕಾರಣ ಭಾರತೀಯ ನ್ಯಾಯ ಸಂಹಿತೆ ಕಲಂ 126(2) ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಕೊನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಮೇಲ್ಕಂಡ ವಿಚಾರವಾಗಿ, ಆರೋಪಿಯಾದ ನೀವು ಸಾಕ್ಷಿ 2 ರವರ ಜೊತೆ ಕೆಲಸ ಮಾಡಿದ ಹಣ ಕೊಡುವ ವಿಚಾರದಲ್ಲಿ ಜಗಳ ತೆಗೆದು ಏಕಾಏಕಿ ಅಲ್ಲೆ ರಸ್ತೆಯ ಬದಿಯಲ್ಲಿ ಬಿದ್ದಿದ್ದ ಬಾಡ್ರಸ್ ಕಲ್ಲನ್ನು ತೆಗೆದುಕೊಂಡು ಸಾಕ್ಷಿ 2 ರವರ ಕಡೆ ಎಸೆದಿದ್ದು, ಸದರಿಯವರು ತಪ್ಪಿಸಿಕೊಂಡಾಗ ಸದರಿ ಕಲ್ಲು ಸಾಕ್ಷಿ 1 ರವರ ತಲೆಯ ಬಲಭಾಗಕ್ಕೆ ತಗುಲಿ ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ. ಆ ಕಾರಣ ಭಾರತೀಯ ನ್ಯಾಯ ಸಂಹಿತೆ ಕಲಂ 118(1) ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಮೇಲ್ಕಂಡ ದೋಷಾರೋಪಣೆಯು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

6.3.26

ದಿನಾಂಕ:06.03.2026
ಸ್ಥಳ: ಪೊನ್ನಂಪೇಟೆ.

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ,ಪೊನ್ನಂಪೇಟೆ.

## ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.

**ಸಿ.ಸಿ.ಸಂ.1737/2025**

**ಪಿರ್ಯಾದಿ** : ಕರ್ನಾಟಕ ಸರ್ಕಾರ,
ಕುಟ್ಟ ಪೋಲೀಸ್,

**ವಿರುದ್ಧ**

**ಆರೋಪಿ** : ಶ್ರೀ ಗಣೇಶ್ ಕುಮಾರ್ ಬಿ.ಜಿ,

**ಭಾರತೀಯ ನಾಗರೀಕ ಸುರಕ್ಷ ಸಂಹಿತೆ ಕಲಂ 263 ರಡಿ ಆರೋಪಿಯ ಹೇಳಿಕೆ**

ಪ್ರಶ್ನೆ.1:- ಇದೀಗ ಓದಿ ಹೇಳಿದ ಆರೋಪಣೆಯು ನಿನಗೆ ಅರ್ಥವಾಯಿತೆ?

ಉತ್ತರ: ಅರ್ಥವಾಯಿತು.

ಪ್ರಶ್ನೆ.2:- ನೀನು ನಿನ್ನ ತಪ್ಪನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆ ಬಯಸುವೆಯಾ?

ಉತ್ತರ: ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು.

(ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆರೋಪಿಯು ನೀಡಿದ ಉತ್ತರಗಳನ್ನು ನನ್ನಿಂದ ದಿ:06.03.2026 ರಂದು ದಾಖಲೆ ಮಾಡಿಕೊಳ್ಳಲಾಯಿತು)

6-3-26

**ದಿನಾಂಕ: 06.03.2026**
**ಸ್ಥಳ: ಪೊನ್ನಂಪೇಟೆ**

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ, ಪೊನ್ನಂಪೇಟೆ

B. G. Ganesh Kumar